# ಧರ್ಮದ ಆವಶ್ಯಕತೆ

ಪರಮಪೂಜ್ಯ ದಲಾಯಿ ಲಾಮಾ

## ದುಃಖನಿವೃತ್ತಿಯ ಮಾರ್ಗವಾಗಿ ಧರ್ಮ

**ಮಾ**ನವನಾಗಿ ಹುಟ್ಟಿದ ಮೇಲೆ ನಮ್ಮ ಜೀವಿತದ ಪರಮೋದ್ದೇಶ, ಸಕಲ ಜೀವಿಗಳು ಸಂತೋಷವಾಗಿರಲು ಹಾಗೂ ದುಃಖವನ್ನು ಹೋಗಲಾಡಿಸಿಕೊಳ್ಳಲು ಮಾರ್ಗವೊಂದನ್ನು ಕಂಡುಹಿಡಿಯುವುದು. ಪ್ರತಿಯೊಂದು ಜೀವಿಯೂ ಸಂತೋಷವಾಗಿರಲು ಬಯಸುತ್ತದೆ, ದುಃಖವನ್ನು ದ್ವೇಷಿಸುತ್ತದೆ. ಕೇವಲ ವಿದ್ಯಾವಂತ, ಬುದ್ಧಿವಂತ ಮನುಷ್ಯರು ಮಾತ್ರವಲ್ಲದೆ, ಜಗತ್ತಿನ ಒಂದು ಕ್ಷುದ್ರ ಜೀವಿಯೂ ತಾನು ಸುಖವಾಗಿರಬೇಕೆಂದು ಇಚ್ಛಿಸುತ್ತದೆ.

ದುಃಖದ ಮೂಲ ಕಾರಣಗಳನ್ನು ಹುಡುಕಿ, ಅವುಗಳನ್ನು ನಾಶಗೊಳಿಸುವುದರಿಂದ ಮಾನವ ಜೀವನ ಸುಖಮಯವೂ, ಸಂಪದ್ಯುಕ್ತವೂ ಆಗುತ್ತದೆ. ಇದನ್ನು ಸಾಧಿಸಲು ನಾವು ನಮ್ಮ ಜೀವನ ದಲ್ಲಿ ಸುಖವನ್ನುಂಟುಮಾಡುವ ಕಾರ್ಯಗಳನ್ನು ಆಚರಿಸಬೇಕು ಹಾಗೂ ದುಃಖವನ್ನುಂಟುಮಾಡುವ ಕಾರ್ಯಗಳನ್ನು ಅನುಸರಿಸ ಬಾರದು. ಬುದ್ಧನ ಧರ್ಮವು ಇದಕ್ಕೆ ದಾರಿಯನ್ನು ತೋರಿಸುತ್ತದೆ. ಇದರಲ್ಲಿ ಯುಕ್ತವಾದ ಮಾರ್ಗವನ್ನು ಉಪದೇಶಿಸಿರುವುದರಿಂದ ಯಾರು ಇದನ್ನು ಆಚರಿಸುವನೋ ಅವನ ಉದ್ದೇಶವು ಸಫಲವಾಗು ತ್ತದೆ. ಹೀಗಾಗಿ, ಧರ್ಮವಲ್ಲದೆ ಬೇರಾವ ಮಾರ್ಗವೂ ದುಃಖನಿವೃತ್ತಿ ಯನ್ನು ಉಂಟುಮಾಡಿ ಸುಖವನ್ನು ತಂದುಕೊಡಲಾರದು.

ಧರ್ಮವನ್ನು ಆಚರಿಸುವ ಮೊದಲು ಅದರ ಸಾರವನ್ನು ಅರಿಯ ಬೇಕು. ಇದನ್ನು ಅರಿತುಕೊಂಡಲ್ಲಿ, ಹಾಗೆ ಅರಿತವನ ಜೀವನಶೈಲಿಗೂ, ಅದನ್ನು ಅರಿಯದೆ ಇರುವವನ ಜೀವನಶೈಲಿಗೂ ದೊಡ್ಡ ಅಂತರ ವಿರುವುದನ್ನು ನಾವು ನೋಡಬಹುದು. ಉದಾಹರಣೆಗೆ, ಕಾಹಿಲೆ ಯಾದಾಗ, ಧರ್ಮವನ್ನು ಅರಿಯದವನು, ದೈಹಿಕವಾಗಿಯೂ, ಮಾನಸಿಕವಾಗಿಯೂ ನರಳುತ್ತಾನೆ. ಧರ್ಮದಲ್ಲಿ ನೆಲೆನಿಂತವನು, ಅಂತಹ ಅನಿಷ್ಟ ಅನುಭವಗಳು ಜೀವನದಲ್ಲಿ ಅನಿವಾರ್ಯವೆಂದೂ, ಅವುಗಳನ್ನು ಸಹಿಸದೆ ಗತ್ಯಂತರವಿಲ್ಲವೆಂದೂ ನಿಶ್ಚಯಿಸಿ ಸಹನೆಯಿಂದ ಜೀವಿಸುತ್ತಾನೆ. ಅಲ್ಲದೆ, ಜೀವನದುದ್ದಕ್ಕೂ ತನ್ನನ್ನು ಕಾಡುವ ದುಃಖಗಳು, ತಾನು ಹಿಂದೆ ಮಾಡಿದ ಕುಕೃತ್ಯಗಳ ಫಲಸ್ವರೂಪವೆಂದು ಅರಿಯುತ್ತಾನೆ. ಕಹಿ ಅನುಭವಗಳು ಈ ಜನ್ಮ-ಮರಣ ಚಕ್ರರೂಪವಾದ ಸಂಸಾರದ ಸ್ವರೂಪವೆಂದೂ, ಅವುಗಳನ್ನು ಅನುಭವಿಸದೆ ಬೇರೆ ದಾರಿಯಿಲ್ಲವೆಂದೂ ತಿಳಿಯುತ್ತಾನೆ. ಹೀಗೆ, ಒಬ್ಬನ ಧಾರ್ಮಿಕ ಜ್ಞಾನ ಹಾಗೂ ಅದರ ಆಚರಣೆಗೆ ಅನುಸಾರವಾಗಿ, ಅವನಿಗೆ ತನ್ನ ದುಃಖ ವನ್ನು ಸಹಿಸುವ ಶಕ್ತಿ ಬರುತ್ತದೆ. ಮಾನಸಿಕ ಶಕ್ತಿಯಿಂದಲೇ ಸರಾಗವಾಗಿ ದೈಹಿಕ ಕಷ್ಟಗಳನ್ನು ಅಡಗಿಸುವ ಸಾಮರ್ಥ್ಯವನ್ನೂ ಪಡೆದುಕೊಳ್ಳ ಬಹುದು.

## ಧರ್ಮದಿಂದ ದುಃಖದ ಕಾರಣಗಳ ಪರಿಹಾರ

ನಾವು ಸುಖವನ್ನೇ ಅನುಭವಿಸಲಿ, ಕಷ್ಟವನ್ನೇ ಅನುಭವಿಸಲಿ ಅಥವಾ ಇನ್ನಾವುದಾದರೂ ರೀತಿಯ ಅನುಭವಗಳೇ ನಮಗೆ ಉಂಟಾಗಲಿ, ಅವುಗಳು ಕಾರಣವಿಲ್ಲದೆ ಉಂಟಾಗವು. ಶಾಸ್ತ್ರಗಳಲ್ಲಿ ಹೇಳಿರುವಂತೆ ಸುಖ-ದುಃಖಗಳು ಕಾರಣ-ಕಾರ್ಯ ನಿಯಮದ ಮೇಲೆ ನಿಂತಿವೆ. ಧರ್ಮದ ಜ್ಞಾನವಿಲ್ಲದ ಮನುಷ್ಯ, ಈ ತಥ್ಯವನ್ನು ಅರಿಯದೆ ಎಲ್ಲವೂ ಆಕಸ್ಮಿಕ ಎಂದೇ ಭಾವಿಸುತ್ತಾನೆ. ತಾನು ಅನುಭವಿಸುವ ಸುಖ-ದುಃಖಗಳು ತನ್ನ ಪೂರ್ವಾರ್ಜಿತ ಕರ್ಮ ಗಳಿಂದಲೇ ಉಂಟಾಗಿರುವುದರಿಂದ ಅವುಗಳಿಗೆ ತಾನೇ ಹೊಣೆ ಎಂಬ ಸತ್ಯವನ್ನು ಧಾರ್ಮಿಕ ವ್ಯಕ್ತಿಯು ಮಾತ್ರ ಅರಿಯುತ್ತಾನೆ; ಕೆಟ್ಟ ಅಕುಶಲ ಕರ್ಮಗಳಿಂದ ದುಃಖವೂ, ಕುಶಲ ಸತ್ಕರ್ಮಗಳಿಂದ ಸುಖವೂ ಉಂಟಾಗುತ್ತದೆಂದೂ ಅರಿಯುತ್ತಾನೆ. ನಿಜವಾದ ಧಾರ್ಮಿಕ ವ್ಯಕ್ತಿಯು ದುಃಖಕ್ಕೆ ಕಾರಣವನ್ನು ಹೀಗೆ ಕಂಡುಕೊಳ್ಳುತ್ತಾನೆ. ಅದಕ್ಕೆ ಪ್ರತಿಯಾಗಿ, ಧರ್ಮದ ಜ್ಞಾನವಿಲ್ಲದ ವ್ಯಕ್ತಿಯು ಅಹಿತಕರ ಅನುಭವ ಗಳಾದಾಗ ತನ್ನ ದುಃಖವನ್ನು ಇನ್ನೂ ಹೆಚ್ಚಿಸಿಕೊಳ್ಳುತ್ತಾನೆ.

ಭೌತಿಕಶರೀರ ಹಾಗೂ ವಿವಿಧ ಚಟುವಟಿಕೆಗಳಲ್ಲಿ ತೊಡಗಿರುವ ಮನಸ್ಸು ಅಥವಾ ಚಿತ್ತ –ಇವೆರಡೂ ಸೇರಿ ವ್ಯಕ್ತಿತ್ವ ಉಂಟಾಗುತ್ತದೆ. ಇವೆರಡರಲ್ಲಿ ಮನಸ್ಸೇ ಪ್ರಧಾನವಾದದ್ದು. ಮನಸ್ಸು ದೇಹವನ್ನು ಆಳುವುದರಿಂದ ಸುಖ ಅಥವಾ ದುಃಖಗಳೆಂಬ ದೈಹಿಕ ಅನುಭವಗಳು ಮನಸ್ಸನ್ನೇ ಹೆಚ್ಚಾಗಿ ಅವಲಂಬಿಸಿರುತ್ತವೆ. ಹೀಗಾಗಿ, ಧರ್ಮಮಾರ್ಗ ದಿಂದ ಚ್ಯುತನಾದವನು, ಮಾನಸಿಕ ದೃಢತೆ ಇಲ್ಲದಿರುವುದರಿಂದ, ಬಹಳ ಯಾತನೆಯನ್ನು ಅನುಭವಿಸಬೇಕಾಗುತ್ತದೆ. ಲಾಭ, ನಷ್ಟ, ಅವಮಾನ, ಮಾನ, ಸ್ತುತಿ, ನಿಂದೆ, ದುಃಖ ಮತ್ತು ಸುಖ-ಈ ಎಂಟು ಲೋಕಧರ್ಮಗಳು ಅಸಂಗನಾದವನನ್ನು ಕದಲಿಸಲಾರವು. ಇವುಗಳಿಂದ ವಿಚಲಿತನಾದವನು ಒಂದೋ ಧರ್ಮವನ್ನು ತಿಳಿದಿರು ವುದಿಲ್ಲ ಅಥವಾ ತಿಳಿದಿದ್ದರೂ ಅವುಗಳನ್ನು ಆಚರಣೆಗೆ ತಂದಿರುವುದಿಲ್ಲ.

## ಧರ್ಮದ ವೈಜ್ಞಾನಿಕ ವಿಧಾನ

ಇಂದ್ರಿಯಸುಖವನ್ನು ಗಳಿಸುವ ಸಾಧನಗಳ ಶಕ್ತಿಯು, ಸೂರ್ಯೋದಯಕ್ಕೆ ಮೊದಲು ಹುಲ್ಲಿನ ಮೇಲಿರುವ ಮಂಜಿನದಕ್ಕಿಂತ ಹೆಚ್ಚಲ್ಲವೆಂಬ ಸತ್ಯವನ್ನು ಧರ್ಮವು ಬೋಧಿಸುತ್ತದೆ. ಧರ್ಮದ ಈ ಬೋಧನೆ ಕಾಲ್ಪನಿಕವಲ್ಲ. ತನ್ನ ಅಥವಾ ಇನ್ನೊಬ್ಬರ ಜೀವನದಲ್ಲಿ ನೋಡಬಹುದಾದ ವಾಸ್ತವಿಕ ಸತ್ಯವದು. ಒಂದು ಅನುಭವವನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಅದರ ಹಿಂದಿನ ಪರಿಸ್ಥಿತಿಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇದೇ, ಕಾರ್ಯ-ಕಾರಣಗಳನ್ನು ನಮಗೆ ತೋರಿಸಿಕೊಡುವ ಧರ್ಮದ ವೈಜ್ಞಾನಿಕ ವಿಧಾನ. ವಿಷಯ ಸುಖಕ್ಕೆ ಕಾರಣವಾಗುವ ಸಾಧನಗಳ ವಿವಿಧ ಅಂಶಗಳನ್ನು ವಿಶ್ಲೇಷಿಸಿ ನೋಡಿದಲ್ಲಿ ಅದರ ಒಳಗಿನ ಪೊಳ್ಳು ನಮ್ಮ ಮುಂದೆ ತೆರೆದು ಕೊಳ್ಳುತ್ತದೆ. ಆದರೆ ಸಾಮಾನ್ಯ ಜನಕ್ಕೆ ಇದು ಸುಲಭವಾಗಿ ಅರ್ಥ ವಾಗುವುದಿಲ್ಲ. ಸುಖ ಸಂಪಾದನೆಗೆ ಅದೆಷ್ಟು ಖರ್ಚು ಮಾಡಬೇಕಾಗು ತ್ತದೆ, ಅದರ ಅನುಭವವೂ ಅದೆಷ್ಟು ಅಸ್ಥಿರ, ಅದರ ಉತ್ಪತ್ತಿಗೆ ಅದೆಷ್ಟು ಸಂಕೀರ್ಣ ಪರಿಸ್ಥಿತಿಗಳ ಅವಶ್ಯಕತೆಯಿದೆ – ಈ ಎಲ್ಲವೂ ಯಾರಿಗೆ ಅರ್ಥವಾಗಿದೆಯೋ, ಅವನು ಮಾತ್ರ ಧರ್ಮದ ಆವಶ್ಯಕತೆ ಯನ್ನು ಮನಗಾಣುತ್ತಾನೆ; ಅವನ ಜೀವನದಲ್ಲಿ ಮಹತ್ತರವಾದ ಬದಲಾವಣೆ ಕಂಡುಬರುತ್ತದೆ. ಆಗ ಕಾಮ, ದ್ವೇಷ, ರಾಗಗಳಿಗೆ ಕಾರಣವಾಗುವ ಬಾಹ್ಯಸುಖಾನ್ವೇಷಣೆಯು ಆಂತರಿಕ ಧರ್ಮಾನ್ವೇಷಣೆ ಯಾಗಿ ಪರಿವರ್ತನಗೊಳ್ಳುತ್ತದೆ. ಧರ್ಮವನ್ನು ಅರಿಯದ ಮನಸ್ಸಿನಲ್ಲಿ

ಮನೆ ಮಾಡಿಕೊಂಡಿರುವ, ನಿಯಂತ್ರಿಸಲು ಅಸಾಧ್ಯವಾದ ಮಾನಸಿಕ ಕ್ಲೇಶಗಳ ಕಾರಣಗಳನ್ನು ಪತ್ತೆಹಚ್ಚಿದಾಗ, ಅವುಗಳು ಕ್ಷೀಣಗೊಳ್ಳುತ್ತವೆ. ಧರ್ಮಮಾರ್ಗವನ್ನು ಅರಿತುಕೊಂಡು ಮನಸ್ಸನ್ನು ಅದರಲ್ಲಿ ಚೆನ್ನಾಗಿ ನೆಲೆ ನಿಲ್ಲಿಸಿದವನು ಸಹನೆ, ಆತ್ಮ-ಸಂಯಮ ಅಥವಾ ವಿವೇಕಗಳಿಂದ ಆ ಮಾನಸಿಕ ಕ್ಲೇಶಗಳ ಹೊಡೆತಗಳನ್ನು ತಡೆದುಕೊಳ್ಳುವ ಯೋಗ್ಯತೆಯನ್ನು ಹೊಂದುತ್ತಾನೆ. ಕ್ರಮೇಣ ಆತ ಅವುಗಳಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಲು ಪ್ರಯತ್ನಿಸಬೇಕು.

ಧರ್ಮದ ಅಜ್ಞಾನದಿಂದ ಕೆಳಗೆ ಹೇಳಿರುವ ಸನ್ನಿವೇಶಗಳು ಒಂದರ ನಂತರ ಒಂದರಂತೆ ಉದ್ಭವಿಸುತ್ತವೆ: ಹೆಚ್ಚುತ್ತಲೇ ಹೋಗುವ ಶತ್ರುಗಳ ಸಂಖ್ಯೆ, ಸ್ವಾರ್ಥೋದ್ದೇಶಗಳ ಗಳಿಕೆಯಲ್ಲಿ ಸ್ಪರ್ಧೆ, ಈ ಸ್ಪರ್ಧೆಯಲ್ಲಿ ಪ್ರತಿಸ್ಪರ್ಧಿಯನ್ನು ಸೋಲಿಸುವ ಪ್ರಯತ್ನ ಹಾಗೂ ಕೊನೆಯಲ್ಲಿ ವಿಜೇತನಾಗಿ ಹೊಮ್ಮುವುದು. ಜಗತ್ತನ್ನು ಈ ದೃಷ್ಟಿಯಲ್ಲಿ ನೋಡುವವರು ತಮ್ಮ ದೇಶವನ್ನು ಶಕ್ತಿಶಾಲಿಯನ್ನಾಗಿ ಮಾಡುವ ಪ್ರಯತ್ನದಲ್ಲಿ ಸೈನ್ಯವನ್ನು ಮಾರಕಾಸ್ತ್ರಗಳಿಂದ ಸಜ್ಜುಗೊಳಿಸುತ್ತಾರೆ; ಕಲಹಗಳಿಗೆ ಯಾವುದೇ ಶಾಂತರೀತಿಯ ಪರಿಹಾರ ನೀಡಲು ಅಸಮರ್ಥರಾಗಿ, ಭೀಕರ ಯುದ್ಧಗಳನ್ನು ಹುಟ್ಟುಹಾಕುತ್ತಾರೆ. ಜನರ ಮನಸ್ಸಿನಲ್ಲಿ ಮೂಡುವ ಇಂತಹ ಲಂಗುಲಗಾಮಿಲ್ಲದ ಕಾಮ, ದ್ವೇಷ, ಭ್ರಮೆ, ಕ್ರೋಧ, ಲೋಭ, ಕಾಪಟ್ಯ, ಕ್ರೌರ್ಯವೇ ಮೊದಲಾದ ಕ್ಲೇಶಗಳ ಶಕ್ತಿಶಾಲಿ ಪ್ರವಾಹವು, ಮೇರೆ ತಪ್ಪಿ ಹರಿಯುವ ದೊಡ್ಡ ದೊಡ್ಡ ನದಿಯಂತೆ, ತನ್ನೆಲ್ಲ ಬಲವನ್ನೂ ಒಗ್ಗೂಡಿಸಿಕೊಂಡು ನುಗ್ಗಿ ಬರುತ್ತದೆ. ಇದರ ಫಲಿತಾಂಶವಾಗಿ, ನಿರಾಶ್ರಯರಾದ ಜೀವಿಗಳು ದುಃಖದ ಆವೇಗದ ಮಧ್ಯೆ ಸಿಕ್ಕಿ, ತಾವು ಇಷ್ಟಪಟ್ಟದ್ದಕ್ಕೆ ವಿರುದ್ಧವಾಗಿ ಜೀವಿಸಬೇಕಾಗುತ್ತದೆ. ಇದಕ್ಕೆ ವಿರುದ್ಧವಾಗಿ ಧರ್ಮದ ಅರಿವು ಇದ್ದು ಯಾರು ಅದರ ಅನುಸಾರವಾಗಿ ನಡೆಯುವರೋ ಅವರ ವಿಷಯದಲ್ಲಿ, ಮೇಲಿನ ವಿವಿಧ ಬಗೆಯ ದುಃಖಗಳ ಭರಾಟೆ ಅಂತ್ಯಗೊಂಡು, ಅವರು ಶಾಂತಿ-ಸಮಾಧಾನಗಳನ್ನು ಅನುಭವಿಸುತ್ತಾರೆ.

ಮನುಷ್ಯಜೀವನದಲ್ಲಿ ಮನಸ್ಸೇ ಪ್ರಧಾನ. ಮನಸ್ಸಿನ ವಿವಿಧ ಕ್ರಿಯೆಗಳು ಅವನ ಮೇಲೆ ತಮ್ಮ ಹಿಡಿತವನ್ನು ಸಾಧಿಸುತ್ತವೆ. ಅಹಂಭಾವ, ಅಸೂಯೆ, ಕಾಮ, ದ್ವೇಷ ಹಾಗೂ ಭ್ರಮೆ- ಇವುಗಳೆಲ್ಲ ಮನಸ್ಸಿನ ಕ್ರಿಯೆಗಳು. ಅವು ತನಗೂ, ಪರರಿಗೂ ಹಾನಿಯನ್ನುಂಟುಮಾಡುವುದರಿಂದ ಅವುಗಳನ್ನು **ಅಕುಶಲ ಧರ್ಮ**ಗಳೆಂದು ಕರೆಯುತ್ತಾರೆ. ಹಾಗೆಯೆ, ಮೈತ್ರಿ, ದಯಾ, ಸೇವಾ, ಭಕ್ತಿ, ತ್ಯಾಗ ಮತ್ತು ವಿಶ್ವಾಸ- ಇವುಗಳೂ ಮಾನಸಿಕ ವ್ಯಾಪಾರಗಳೇ. ಆದರೆ, ಅವು ಉಪಕಾರಕವಾದುದರಿಂದ ಅವುಗಳನ್ನು **ಕುಶಲ ಧರ್ಮ**ಗಳೆಂದು ಕರೆಯುತ್ತಾರೆ. ಈ ಕುಶಲ ಧರ್ಮಗಳ ಶಕ್ತಿಯಿಂದ ಮನಸ್ಸಿನಲ್ಲಿರುವ ದೋಷ, ಕ್ಲೇಶಗಳು ನಾಶವಾಗುತ್ತವೆ. ಇವುಗಳನ್ನು ಮಾನವನು ಆಸಕ್ತಿವಹಿಸಿ ಬೆಳೆಸಿಕೊಂಡಲ್ಲಿ ದೋಷಪೂರಿತನಾಗುವುದರಿಂದ ಪಾರಾಗುತ್ತಾನೆ. ಹ್ರೀಯನ್ನು (ಕೆಟ್ಟ ಕೆಲಸ ಮಾಡುವುದಕ್ಕೆ ನಾಚಿಕೆ) ಬೆಳಸಿಕೊಂಡಲ್ಲಿ ಮನಸ್ಸಿನ ಕ್ಲೇಶಗಳಿಂದ ಮುಕ್ತಿಯನ್ನು ಹೊಂದಬಹುದು. ಇದರಿಂದ **ಮೈತ್ರಿ, ಕರುಣೆ, ಮುದಿತ**ಗಳೇ ಮೊದಲಾದ ಗುಣಗಳಲ್ಲಿ ಶ್ರದ್ಧೆಯುಂಟಾಗುತ್ತದೆ. ಪರರ ನಿಂದೆಯ ಭಯವೂ, ಅನ್ಯಾಯ ಅನೈತಿಕ ಕೆಲಸಗಳನ್ನು ಮಾಡುವುದನ್ನು ತಡೆಯುತ್ತದೆ. ಮನುಷ್ಯನನ್ನು ಕೆಟ್ಟ ಕೆಲಸ ಮಾಡದಂತೆ ತಡೆಯುವಲ್ಲಿ ಮೇಲಿನ ಗುಣಗಳು ಕಾವಲುಗಾರರಂತೆ ಕೆಲಸ ಮಾಡುತ್ತವೆ. ಇವುಗಳ ಸಾಮರ್ಥ್ಯದಿಂದ ಹಲವು ಬಗೆಯ ಪ್ರಮಾದಗಳಿಂದ ರಕ್ಷಣೆ ಪಡೆದು, ಧರ್ಮಾವಲಂಬಿಯಾದ ಮಾನವನು ಸಂತೃಪ್ತಿಯ ಜೀವನ ನಡೆಸುತ್ತಾನೆ. ಸಂತೃಪ್ತಿಯ ಜೀವನದಲ್ಲಿಯೇ ಶಾಂತಿಯಿದೆ, ಸುಖವಿದೆ; ಅಷ್ಟೇ ಅಲ್ಲದೆ, ಜೀವನವು ಅಸಹ್ಯವೆನಿಸುವಷ್ಟು ಕಷ್ಟವಾಗುವುದಿಲ್ಲ. ಈ ಕಾರಣಗಳಿಂದ, ಧರ್ಮದ ಮೂಲತತ್ತ್ವವನ್ನು ಅರ್ಥಮಾಡಿಕೊಳ್ಳಬೇಕು ಹಾಗೂ ಅದನ್ನು ಜೀವನದಲ್ಲಿ ಸರ್ವಥಾ ಆಚರಣೆಗೆ ತರಬೇಕು. ಇದೇ ಒಬ್ಬನ ವೈಯಕ್ತಿಕ ಜೀವಿತದ ಉದ್ಧಾರಕ್ಕಾಗಿ ಮತ್ತು ಸಮಾಜದ ಶ್ರೇಯಸ್ಸಿಗಾಗಿ ಇರುವ ಏಕೈಕ ಮಾರ್ಗ.

(ಸಂಗ್ರಹ)

## ವಿನೋದದಿಂದ ವೇದಾಂತ

**ಮನುಷ್ಯನ ಆಸೆಗಳಿಗೆ ಕೊನೆಯೇ ಇಲ್ಲ. ಆಸೆಗಳು ಬರುವುದು ಅಜ್ಞಾನದಿಂದ. ಆತ್ಮಸ್ವರೂಪಿಗಳಾದ ನಾವು ಪರಿಪೂರ್ಣರು ಎಂಬ ಅರಿವು ಇಲ್ಲದಾಗ ಆಸೆಗಳು ಹುಟ್ಟಿಕೊಳ್ಳುತ್ತವೆ.** ಎರಡು ಕತ್ತೆಗಳಿದ್ದವು. ಒಂದು ಕಾಡಿನ ಕತ್ತೆ. ಇನ್ನೊಂದು ಊರಿನ ಕತ್ತೆ. ಅವರೆಡೂ ಒಮ್ಮೆ ಭೇಟಿಯಾದವು. "ಏನಣ್ಣಾ, ಹೇಗಿದ್ದೀಯೆ?" ಎಂದಿತು ಕಾಡಿನ ಕತ್ತೆ. "ಅಯ್ಯೋ, ಏನು ಹೇಳೋದು. ಒಂದು ನಿಮಿಷ ಕೂಡ ನನ್ನ ಒಡೆಯ ಬಿಡೋದಿಲ್ಲ, ಸಿಕ್ಕಾಪಟ್ಟೆ ದುಡಿಸುತ್ತಾನೆ" ಎಂದಿತು ಊರಿನ ಕತ್ತೆ. "ಹಾಗಾದರೆ ಕಾಡಿಗೆ ಬಂದುಬಿಡು." ಎಂದು ಆಹ್ವಾನಿಸಿತು, ಕಾಡಿನ ಕತ್ತೆ. "ಇಲ್ಲಪ್ಪಾ, ನನ್ನ ಒಡೆಯನಿಗೆ ನನ್ನ ಮೇಲೆ ಎಷ್ಟು ಪ್ರೀತಿ ಅಂದರೆ, ಅವನ ಮಗಳಿಗೆ, 'ಕತ್ತೇ, ಕತ್ತೇ' ಅಂತ ಒಮ್ಮೊಮ್ಮೆ ಕರೀತಾನೆ. ಗೊತ್ತಾ?" ಎಂದಿತು ಊರಿನ ಕತ್ತೆ. "ಅದಕ್ಕೇನಂತೆ, ಅದರಿಂದ ನಿನಗೇನು ಬಂತು?" ಎಂದಿತು ಕಾಡಿನ ಕತ್ತೆ. "ಅಷ್ಟು ಮಾತ್ರ ಅಲ್ಲಪ್ಪಾ, ನನ್ನ ಒಡೆಯ ಅವನ ಮಗಳಿಗೆ 'ನಿನ್ನನ್ನ, ನಿನ್ನನ್ನ....ಈ ಕತ್ತೆಗೆ ಕೊಟ್ಟು ಮದುವೆ ಮಾಡಿಬಿಡುತ್ತೇನೆ ನೋಡು' ಅಂತಲೂ ಹೇಳ್ತಾ ಇರ್ತಾನೆ. **ಅದಕ್ಕೇ ಕಾಯ್ತಾ ಇದ್ದೀನಿ**" ಎಂದಿತು ಊರಿನ ಕತ್ತೆ, ಜೊಲ್ಲು ಸುರಿಸುತ್ತ.

**ಈ ಜೀವನ ನಿತ್ಯವಾದುದು ಎಂದು ಭಾವಿಸಿ ನಾವು ಭ್ರಮೆಗೆ ಒಳಗಾಗುತ್ತೇವೆ; ಭವಿಷ್ಯದಲ್ಲಿ ನಮ್ಮ ಗತಿ ಏನಾಗುತ್ತದೆ ಎನ್ನುವುದನ್ನು ಮರೆತೇ ಬಿಡುತ್ತೇವೆ. ಆದರೆ ಇತರರಿಗೆ ಮಾತ್ರ ನಮ್ಮ ವೇದಾಂತದ ಉಪದೇಶ ಮಾಡುತ್ತೇವೆ. ಒಬ್ಬ ಕುರುಡ ಇನ್ನೊಬ್ಬ ಕುರುಡನಿಗೆ ದಾರಿತೋರಿದಂತೆ ಇದು ಎಂದು ಕಠೋಪನಿಷತ್ತು ಹೇಳುತ್ತದೆ.** ಶಾಲೆಯ ಮಕ್ಕಳ ಗ್ರೂಪ್ ಫೋಟೋ ತೆಗೆಯಲಾಯಿತು. ಎರಡು ಮೂರು ದಿನಗಳ ನಂತರ ಶಿಕ್ಷಕಿ ಮಕ್ಕಳಿಗೆ ಆ ಫೋಟೋ ಕೊಂಡುಕೊಳ್ಳುವಂತೆ ಪುಸಲಾಯಿಸುತ್ತಿದ್ದರು. ಮಕ್ಕಳಿಗೆ ಫೋಟೋ ತೋರಿಸುತ್ತ ಹೇಳುತ್ತಿದ್ದರು: "ನೋಡಿ, ಹಲವು ವರ್ಷಗಳಾದ ನಂತರ, ನೀವು ದೊಡ್ಡವರಾದ ಮೇಲೆ, ಈ ಫೋಟೋದಲ್ಲಿರುವ ನಿಮ್ಮ ಸಹಪಾಠಿಗಳನ್ನು ತೋರಿಸುತ್ತ ಹೀಗೆ ಹೇಳಬಹುದು: 'ಇದೋ ರಮೇಶ, ಈಗ ಡಾಕ್ಟರಾಗಿದ್ದಾನೆ', 'ಇದೋ ಗಿರಿಜಾ, ಇವಳು ಈಗ ಲಾಯರ್.' " ಹಿಂದಿನ ಬೆಂಚಿನಿಂದ ಒಂದು ಸಣ್ಣ ದನಿ ಕೇಳಿಸಿತು. **"ಇದೋ ನೋಡು ನಮ್ಮ ಮೇಡಂ, ಅವರೀಗ ಸತ್ತುಹೋಗಿದ್ದಾರೆ!"** ▪